*ಚಂದ್ರ ಕೆ.ಎಸ್. ಕೌಡ್ಲೆ*

*ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸೋಣಾಂತಿದ್ದೇನೆ, ಅದಕ್ಕೆ ವಿದ್ಯಾರ್ಹತೆ ಏನು ಗುರು?*




ಎರಡು ದರೋಡೆ, ನಾಲ್ಕು ಅತ್ಯಾಚಾರ, ಹತ್ತು ಕೊಲೆ ಮಾಡಿದ್ದರೆ ಸಾಕೇ ಸಾಕು ಶಿಷ್ಯಾ!

*ಮಲ್ಲಿಕಾರ್ಜುನ ಹ.ಬಗಲಿ, ಗಿರಗಾಂವ*

*ಸತ್ಯವಂತರಿಗೇ ಬಹಳ ಕಷ್ಟಗಳು ಬರುತ್ತವೆ, ಏಕಿರಬಹುದು?*

ಸಮಯಕ್ಕೆ ತಕ್ಕ ಸುಳ್ಳು ಹೇಳಿ ಬಚಾವಾಗಲು ಬರುವುದಿಲ್ಲವಲ್ಲಾ..!

*ಕಂಡಕ್ಟರ್ ರಾಜು, ಗುಬ್ಬಿ*

*ಪ್ರತಿಫಲ ಬಯಸದ ಪ್ರೀತಿ ಹುಡುಗಿಯರಲ್ಲಿರುತ್ತಾ?*

ಖಂಡಿತ! 'ಚಾಕೇಟ್ ಕೊಟ್ಲೆ ಮಾತ್ಲ ಪಪ್ಪಿ ಕೊಲ್ತೀನಿ' ಎಂದು ಹೇಳಿದ ಯಾವ ಪುಟ್ಟ ಹುಡುಗಿಯನ್ನೂ ನಾನು ಕಾಣೆ!

*ಹಾಡ್ಯ ಜಯಾನಂದ, ಮೈಸೂರು*

*ಅಬ್ಕಾರಿ ಖಾತೆಯ ಖುರ್ಚಿಯ ಮೇಲೆ ಕುಳಿತರೆ ನಶೆ ಏರುತ್ತದೆಯೆ?*



ಗೋರಿಕಲ್ಲಿನ ಮೇಲೆ ಕುಳಿತಾಕ್ಷಣ ಸತ್ತಂತಾಗುವುದೇ? ಆಯಾ ಸ್ಥಿತಿಗೆ ಆಯಾ ಅಯೋಗ್ಯತೆ ಸಂಪಾದಿಸಬೇಕು!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*

*ಅಲ್ರಣ್ಣಾ, ಪಡ್ಡೆ ಹುಡುಗರು ಇರುವಂತೆ ಪಡ್ಡೆ ಹುಡುಗಿಯರು ಇದ್ದಾರೆಯೇ?*

ಇಲ್ಲ, ಆಕಾರದಲ್ಲಿ ವ್ಯತ್ಯಾಸವಿರುತ್ತದೆ!

*ಆರ್. ಮಧುಸೂದನ್, ಹಾಸನ*

*ಓದುಗನನ್ನು ಹಿಡಿದಿಟ್ಟುಕೊಳ್ಳುವುದು ಪ್ರೇಯಸಿಯನ್ನು ಹಿಡಿದಿಟ್ಟುಕೊಳ್ಳುವಷ್ಟೇ ಕಷ್ಟವಾ?*

ಅದಕ್ಕಿಂತಲೂ ಕಠಿಣ; ಅಲ್ಲಿ ಒಂದೇ ಆಕರ್ಷಣೆ ಸಾಕು, ಇಲ್ಲಿ ವೈವಿಧ್ಯತೆ ಇರಲೇಬೇಕು!

*ಕೇಶವ ಎನ್. ಪೈ, ಹೊನ್ನಾವರ*

*ಮಹಾದೇವನಿಗೆ ಏಕೆ ಮೂರು ಕಣ್ಣು?*

ಕಾಮಕ್ಕೊಂದು, ಕಾಮನ್ ಆಗೊಂದು, ಕಾಮದ ಫುಲ್‌ಸ್ಟಾಪ್‌ಗೊಂದು!

*ಬಿಂಡಿಗನವಿಲೆ ರಂಗರಾಜು, ಬೆಂಗಳೂರು*

*ರಾಜಕಾರಣಿಗಳಿಂದ ಪ್ರತಿನಿತ್ಯ ಮೂರ್ಖರಾಗುತ್ತಿರುವ ನಮಗೆ ಪ್ರತ್ಯೇಕ ಮೂರ್ಖರ ದಿನಾಚರಣೆ ಬೇಕೆ?*

ನಿಮ್ಮ ಪ್ರಾಮಾಣಿಕತೆಗೆ ಮೆಚ್ಚಿದೆ; ನಿತ್ಯವೂ ಮೂರ್ಖರ ದಿನವನ್ನು ನೀವು ಆಚರಿಸಿ, ನಮ್ಮದೇನೂ ಅಭ್ಯಂತರವಿಲ!್ಲ

*ಚಂದ್ರು, ಬಿಸಿಲುಕೊಪ್ಪ*

*ಅಂದಿನ ಕೃಷ್ಣನ ಸಹೋದರ ಬಲರಾಮನಿಗೂ, ಇಂದಿನ ಸೀರಿಯಲ್‌ಧರ ಸೀತಾರಾಮನಿಗೂ ಏನು ವ್ಯತ್ಯಾಸ?*

ಬಲರಾಮನದು ಹಲಾಯುಧ, ಸೀತಾರಾಮರದು ಕುತೂ–ಹಲಾಯುಧ!

*ಎ.ಕೆ. ಪಟ್ಟಾಭಿ, ಬೆಂಗಳೂರು*

*ಕಪ್ಪುಹಣ ಉಳ್ಳವರು ಕಡು ದೈವಭಕ್ತರು ಎಂಬ ಮಾತನ್ನು ನೀವು ಒಪ್ಪುವಿರಾ?*

ನಿಜವೇ, ಕಪ್ಪುಹಣದವರಿಂದ ಕಾಣಿಕೆ ಪಡೆದೂ ಪಡೆದೇ ತಿಮ್ಮಪ್ಪನೂ ಕಪ್ಪಾಗಿಹೋದ, ಪಾಪ!

*ಪಿ.ಜೆ. ರಾಘವೇಂದ್ರ, ಮೈಸೂರು*

*ಕಪ್ಪು ಮುಖಕ್ಕೆ ಬಿಳಿಯ ಪೌಡರ್, ಬಿಳಿಯ ಕೂದಲಿಗೆ ಕಪ್ಪು ಕಲರ್! ಏಕೆ ರಾಮ್?*

ಹಗಲಿನ ಚಿತ್ರಕ್ಕೆ ಇರುಳಿನ ಚೌಕಟ್ಟೇ ಚಂದ!

*ಎಚ್.ಆರ್. ದೇಸಾಯಿ, ರಾಯಚೂರು*

*ಸತ್ತವರನ್ನು ಸ್ವರ್ಗಸ್ಥ ಎನ್ನುತ್ತಾರೆ, ನರಕಸ್ಥ ಎಂದೇಕೆ ಎನ್ನುವುದಿಲ್ಲ?*

ಹಾಗೆಂದವನ ಜೀವನವನ್ನು ಹೋದವನ ಬಂಧುಗಳು ನರಕ ಮಾಡುವುದರಿಂದ!

*ಸಾವಿತ್ರಮ್ಮ ಕೆ. ವಿಭೂತಿ, ಹರಿಹರ*

*ಅಭಿಮಾನ, ಸ್ವಾಭಿಮಾನ ಇಲ್ಲದವರಿಗೇ ಈಗ ಹೆಚ್ಚಿನ ಮಾನ, ಸಮ್ಮಾನ ಅಲ್ಲವೆ?*

ವಿ ಫೈಟ್ ಫಾರ್ ಮನಿ ಎಂದ ಜಪಾನಿ, ವಿ ಫೈಟ್ ಫಾರ್ ಆನರ್ ಎಂದ ಅಮೆರಿಕದವ; ?ಯಾರಿಗೆ ಯಾವುದಿಲ್ಲವೋ ಅದಕ್ಕೆ ಫೈಟ್ ಮಾಡುತ್ತಾರೆ? ಎಂದ ಜಪಾನಿ!

## ಬಹುಮಾನಿತ ಪ್ರಶ್ನೆ

ಅರಕೆರೆ ಪಿ. ಸುರೇಶ್, ಭದ್ರಾವತಿ

*ಕುಡಿದ ಮೇಲೆಯೇ ನಿಜ ಹೊರಗೆ ಬರುವುದೇಕೆ?*

ಒಳಗಿರುವ ನಿಜಕ್ಕೆ ಹೆಂಡದ ವಾಸನೆ ತಡೆಯಲಾರದೆ ಹೊರಬಂದುಬಿಡುವುದಂತೆ!

ಎಂ.ವಿ. ವೆಂಕಮ್ಮ, ಬಳ್ಳಾರಿ

*ಹೆಣ್ಣಿಗೆ ದೇವನು ಎರಡು ನಾಲಿಗೆ ಕೊಟ್ಟರೆ, ಗಂಡಿಗೆ ಏನು ಕೊಡುತ್ತಾನೆ?*

ಇರುವ ಎರಡೂ ಕಿವಿಗಳನ್ನು ಕಿತ್ತುಕೊಂಡು ನೆಮ್ಮದಿ ಕೊಡುತ್ತಾನೆ!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*

*ಗಂಡನ ಜೇಬಿನಿಂದ ಹೆಂಡತಿ ಹಣ ಕದ್ದರೆ ತಪ್ಪೋ, ಸರಿಯೋ?*

ಈಗ ಹಾಗೆಲ್ಲಾ ಕದಿಯಲ್ಲ ಬಿಡಿ; ಹೆಚ್ಚೆಂದರೆ ಗಂಡನ ಕ್ರೆಡಿಟ್ ಕಾರ್ಡ್ ಉಡೀಸ್ ಮಾಡುತ್ತಾರಷ್ಟೆ!

ಎಚ್. ಆನಂದ್‌ಕುಮಾರ್, ಚಿತ್ರದುರ್ಗ

*ಮಿಸ್ಟರ್ ರಾಮ್‌ಜಿ, ಜೀವನದಲ್ಲಿ ನಿರ್ಲಕ್ಷ್ಯವೂ ಒಂದು ಭಾಗವೆ?*

ಅದು ಕೇವಲ ಒಂದು ಭಾಗವಲ್ಲ, ಭಾಷೆ, ಸಂಪ್ರದಾಯ, ಪರಂಪರೆಗಳ ನಿರ್ಲಕ್ಷ್ಯವೇ ಕನ್ನಡಿಗನ ಜೀವನಶೈಲಿ!

*ಮಹಾವೀರ ಕಾಸಾರ, ಶಿವಮೊಗ್ಗ*

*ಸುಳ್ಳನಿಗೆ ಸೋಮವಾರ, ಕಳ್ಳನಿಗೆ ಅಮಾವಾಸ್ಯೆ, ನಿಮಗೆ?*

ಎಲ್ಲ ಬಲ್ಲೆನೆಂಬ ಬಡಿವಾರ!

ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್

*ಈಗ ಜನರ ಮೈಮೇಲೆ ಬರುವ ದೇವರುಗಳು ಸಹ ಇಂಗ್ಲಿಷ್ ಮಾತನಾಡುತ್ತವಲ್ಲಾ..?*

ಹನ್ನೊಂದನೆಯ ಅವತಾರವನ್ನು ಅಮೆರಿಕದಲ್ಲಿ ತಾಳುವ ಇರಾದೆಯಂತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಎಲ್ಲಾ ನೋಟುಗಳ ಮೇಲೆ ಗಾಂಧೀಜಿ ನಗುತ್ತಿರುವುದಕ್ಕೆ ಮುಖ್ಯ ಕಾರಣವೇನು?*




ಅತ್ತರೆ ನೋಟು ಒದ್ದೆಯಾಗುತ್ತದಲ್ಲಾ...!